## ಸಮಾಚಾರ ಸಣ್ಣದಲ್ಲ

### ರಾಮಮಂದಿರ ಬಾಕಿ ಕಾರ್ಯ ಸದ್ಯವೇ ಪೂರ್ಣ

**ಲಕ್ನೋ:** ಅಯೋಧ್ಯೆ ರಾಮಮಂದಿರದ ಬಾಕಿ ಉಳಿದ ನಿರ್ಮಾಣ ಕಾರ್ಯವು ನ.15ರೊಳಗೆ ಸಂಪೂರ್ಣವಾಗಿ ಪೂರ್ಣಗೊಳ್ಳಲಿದೆ ಎಂದು ದೇವಾಲಯ ನಿರ್ಮಾಣ ಸಮಿತಿ ಅಧ್ಯಕ್ಷ ನೃಪೇಂದ್ರ ಮಿಶ್ರಾ ತಿಳಿಸಿದ್ದಾರೆ. ಅಯೋಧ್ಯೆಯ ರಾಮಮಂದಿರ ಸಂಕೀರ್ಣದಲ್ಲಿ ಒಟ್ಟು 150 ನಿರ್ಮಾಣ ಯೋಜನೆಗಳಲ್ಲಿ 148 ಪೂರ್ಣಗೊಂಡು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ಗೆ ಹಸ್ತಾಂತರಿಸಲಾಗಿದೆ. ದೇವಾಲಯದ ಹೊರ ಪರಿಧಿ ಅಥವಾ ಗೋಡೆ ನಿರ್ಮಾಣವು ಟ್ರಸ್ಟ್‌ಗೆ ಹಸ್ತಾಂತರಿಸಬೇಕಾದ ಪ್ರಮುಖ ಕಾರ್ಯವಾಗಿದೆ ಎಂದು ಮಿಶ್ರಾ ಹೇಳಿದ್ದಾರೆ. ದೇವಾಲಯದ ಗೋಡೆ ಮತ್ತು ಮುಂಭಾಗದ ದೀಪಗಳ ಕೆಲಸವನ್ನು ನ.15ರೊಳಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ. ದೇವಾಲಯ ನಿರ್ಮಾಣ ಸಮಿತಿಯ ಮೂರು ದಿನಗಳ ಸಭೆಯ ಎರಡನೇ ದಿನದಂದು ನಿರ್ಮಾಣ ಪ್ರಗತಿಯನ್ನು ಪರಿಶೀಲಿಸಿದ ನಂತರ, ಮಳೆಯಿಂದಾಗಿ ಗೋಡೆ ಛಾವಣಿಯ ಮೇಲಿನ ನೀರು ಸಂಸ್ಕರಣಾ ಕಾರ್ಯದ ಮೇಲೆ ಪರಿಣಾಮ ಬೀರಿದೆ ಎಂದು ಮಿಶ್ರಾ ಹೇಳಿದ್ದಾರೆ. ಹವಾಮಾನ ಸುಧಾರಿಸಿದಾಗ ಈ ಕೆಲಸ ಪೂರ್ಣಗೊಳ್ಳುತ್ತದೆ. ದೀಪಾವಳಿಯ ಸಮಯದಲ್ಲಿ ದೇವಾಲಯದ ವಾಸ್ತುಶಿಲ್ಪದ ಭವ್ಯತೆ ಮತ್ತು ಸೌಂದರ್ಯಕ್ಕೆ ಹೊಂದಿಕೆಯಾಗುವಂತೆ ಬೆಳಕಿನ ವ್ಯವಸ್ಥೆಗಳನ್ನು ಮಾಡಲಾಗುವುದು. ನವೆಂಬರ್ 15 ರೊಳಗೆ ದೇವಾಲಯದ ಗೋಡೆಗಳು ಮತ್ತು ಮುಂಭಾಗದ ದೀಪಾಲಂಕಾರವನ್ನು ಪೂರ್ಣಗೊಳಿಸುವುದು ಗುರಿಯಾಗಿದೆ ಎಂದು ತಿಳಿಸಿದ್ದಾರೆ.

### ವಿಪಕ್ಷಗಳಿಂದ ಆಡಳಿತ ಬದಲಾವಣೆ ಕಾರ್ಯಸೂಚಿ

**ದೆಹಲಿ:** ಸಿಜೆಪಿ ಆಯೋಜಿಸಿರುವ 'ತಿರಂಗಾ ಯಾತ್ರೆ'ಯ ಸಂದರ್ಭದಲ್ಲಿ ನಡೆಯುತ್ತಿರುವ ಪ್ರತಿಭಟನೆಗಳ ಕುರಿತು



ಪ್ರತಿಕ್ರಿಯಿಸಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ವಿರೋಧ ಪಕ್ಷಗಳು ಆಡಳಿತ ಬದಲಾವಣೆಯ ಅಜೆಂಡಾವನ್ನು ಅನುಸರಿಸುತ್ತಿವೆ ಎಂದು ಆರೋಪಿಸಿದ್ದಾರೆ. ಈ ನಡೆ ನಗರ ನಕ್ಸಲರು ಎಂದು ಅವರು ಕರೆದ ಗುಂಪಿನ ದುರುದ್ದೇಶಗಳನ್ನು ಬಯಲುಗೊಳಿಸಿದೆ ಎಂದು ಅವರು ಹೇಳಿದ್ದಾರೆ.

ಕೆಪಿಎಸ್‌ಸಿ ಸುಧಾರಣೆ ಕುರಿತ ಸಂವಾದದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅಭಿಮತ

# ಸರಕಾರಿ ನೌಕರಿ ಸೇವಾವಧಿ 15 ವರ್ಷ ಸಾಕು: ಕುಮಾರಸ್ವಾಮಿ

**ವಿಶ್ವವಾಣಿ ಸುದ್ದಿಮನೆ ಬೆಂಗಳೂರು**

ಪ್ರತಿ ಕುಟುಂಬಕ್ಕೆ ತಲಾ ಒಂದು ಉದ್ಯೋಗ ಕಲ್ಪಿಸುವ ಉದ್ದೇಶದಿಂದ 35 ವರ್ಷದ ಸೇವಾವಧಿ ಬದಲಿಗೆ 10ರಿಂದ 15 ಅಥವಾ 20 ವರ್ಷಕ್ಕೆ ಇಳಿಸಬೇಕು. ಇಷ್ಟು ಮಿತಿಯನ್ನು ಹಾಕುವ ಮೂಲಕ ಉದ್ಯೋಗಗಳನ್ನು ಎಲ್ಲರಿಗೂ ಕೊಡುವ ಪ್ರಯತ್ನ ಮಾಡಬಹುದು ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಅಭಿಪ್ರಾಯಪಟ್ಟರು.

ಕೆಪಿಎಸ್‌ಸಿ ಶುದ್ಧೀಕರಣ ಹಾಗೂ ಅಕ್ರಮ ನೇಮಕಾತಿಗಳಿಗೆ ಚರಮಗೀತೆ ಹಾಡುವ ನಿಟ್ಟಿನಲ್ಲಿ ಕೆಪಿಎಸ್‌ಸಿ ಅಭ್ಯರ್ಥಿಗಳು, ಉದ್ಯೋಗ ವಂಚಿತರು, ಅನ್ಯಾಯಕ್ಕೆ ತುತ್ತಾದವರು ಹಾಗೂ ವಿದ್ಯಾರ್ಥಿ ಯುವ ಜನರೊಂದಿಗೆ ಬೆಂಗಳೂರಿನ ವಿಜಯನಗರದಲ್ಲಿರುವ ಬಂಟರ ಸಂಘದಲ್ಲಿ ನಡೆದ ಸಂವಾದದಲ್ಲಿ, ಭವಿಷ್ಯದಲ್ಲಿ ಉದ್ಯೋಗ ಸೃಷ್ಟಿ ಮಾಡುವ ಬಗೆ ಹಾಗೂ ಸರಕಾರಿ ಉದ್ಯೋಗಗಳ ನೇಮಕದಲ್ಲಿ ತಮಗಿರುವ ಹೊಸ ಆಲೋಚನೆ ಎಂದರು.

ಕೆಲಸದಿಂದ ನಿವೃತ್ತಿಯಾಗುವ ಉದ್ಯೋಗಿ ನಿವೃತ್ತಿ ಆದ ನಂತರ ದೊರೆಯುವ ಪಿಂಚಣಿ ಸೇರಿದಂತೆ ಎಲ್ಲಾ ಸೌಲಭ್ಯಗಳಿಗೆ ಅರ್ಹನಾಗಿರುತ್ತಾನೆ. ಇದರಿಂದ ಉದ್ಯೋಗ ಸಿಗದೇ ಇರುವವರಿಗೆ ಅವಕಾಶ ದೊರೆಯುತ್ತದೆ ಹಾಗೂ ನಿರುದ್ಯೋಗ ನಿವಾರಣೆಯಲ್ಲಿ ದೊಡ್ಡ ಪ್ರಯತ್ನ ಮಾಡಿದಂತೆ ಆಗುತ್ತದೆ. ಮುಂದಿನ ದಿನಗಳಲ್ಲಿ ಅವಕಾಶ ಸಿಕ್ಕರೆ ನಾನು ಈ ಯೋಜನೆ ಅನುಷ್ಠಾನಕ್ಕೆ ತರುವ ಉದ್ದೇಶ ಹೊಂದಿದ್ದೇನೆ. ಯುವ ಜನರಿಗೆ ಉದ್ಯೋಗ ಕಲ್ಪಿಸುವ ದೃಷ್ಟಿಯಿಂದ ಇಂಥ ಯೋಚನೆ ಕಾರ್ಯರೂಪಕ್ಕೆ ಬಂದರೆ ಹೇಗೆ ಎಂದು ನಾನು ಆಲೋಚನೆ ಮಾಡುತ್ತಿದ್ದೇನೆ. ನನ್ನ ಪ್ರಕಾರ ಪ್ರತಿ ಮನೆಗೂ ಕನಿಷ್ಠ ಒಂದು ಸರಕಾರಿ ಕೆಲಸವಾದರೂ ದೊರೆಯಬೇಕು. ನನ್ನ ಆಲೋಚನೆ ಜನರ ಮುಂದೆ ಇರಿಸಿದ್ದೇನೆ. ಇದರ ಬಗ್ಗೆ ಸಾರ್ವಜನಿಕ ವಲಯದಲ್ಲಿ ಚರ್ಚೆ ನಡೆಯಲಿ ಎಂದರು.

ನಿರುದ್ಯೋಗ ಅಗಾಧ ಪ್ರಮಾಣದಲ್ಲಿ ಬೆಳೆಯುತ್ತಿದೆ. ಸರಕಾರಿ ಮಟ್ಟದಲ್ಲಿ ಸಮರ್ಥರಿಗೆ ಉದ್ಯೋಗ ನೀಡಲು ಆಗುತ್ತಿಲ್ಲ. ಕರ್ನಾಟಕ ಲೋಕಸೇವಾ ಆಯೋಗ ಸಂಪೂರ್ಣವಾಗಿ ನಿಷ್ಕ್ರಿಯವಾಗಿದೆ. ಪಾರದರ್ಶಕವಾಗಿ, ನ್ಯಾಯ ಸಮ್ಮತವಾಗಿ ಅರ್ಹರನ್ನು ಆಯ್ಕೆ ಮಾಡಿ ಸರಕಾರಿ ಸೇವೆಗೆ ಕಳಿಸಬೇಕಾದ ಕೆಪಿಎಸ್ಸಿ ಭ್ರಷ್ಟಾಚಾರದ ಕೂಪವಾಗಿದೆ. ಹಣಕ್ಕಾಗಿ ಉದ್ಯೋಗ ಮಾರಿಕೊಳ್ಳಲಾಗುತ್ತಿದೆ. ಸಂಸ್ಥೆಯ ಅಧ್ಯಕ್ಷರು ಮತ್ತು ಸದಸ್ಯರು ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಸಂಸ್ಥೆಗೆ ಹೋಗುವ ಅಧಿಕಾರಿಗಳು ಕೂಡ ಹಣ ಮಾಡುವ ದಂಧೆಯಲ್ಲಿ ನಿರತರಾಗಿದ್ದಾರೆ ಎಂದರು.



> ಭವಿಷ್ಯದಲ್ಲಿ ನೀವು ಹೆದರಬೇಕಾಗಿಲ್ಲ. ನಿಮ್ಮ ಕಾಳಜಿ ಮತ್ತು ಕನಸುಗಳನ್ನು ಗೌರವಿಸುವ ನಾಯಕರಿಗೆ ಮಣೆ ಹಾಕಿ. ನಿಮ್ಮ ಭಾವನೆಗಳಿಗೆ ದನಿಯಾಗುವ ವ್ಯಕ್ತಿಗಳಿಗೆ ಅವಕಾಶ ನೀಡಿ
>
> -ಕುಮಾರಸ್ವಾಮಿ, ಕೇಂದ್ರ ಸಚಿವ

**ಯುವಜನರ ಆಕ್ರೋಶ:** ಈ ಸಂದರ್ಭದಲ್ಲಿ ಅನೇಕ ಉದ್ಯೋಗ ವಂಚಿತ ಅಭ್ಯರ್ಥಿಗಳು ಸಚಿವರಲ್ಲಿ ದೂರುಗಳನ್ನು ಹೇಳಿಕೊಂಡರು. ಪರೀಕ್ಷಾ ವಿಧಾನ, ತಪ್ಪು ತಪ್ಪಾಗಿ ಮುದ್ರಣವಾಗುವ ಪ್ರಶ್ನೆ ಪತ್ರಿಕೆಗಳು, ಒಎಂಆರ್ ಶೀಟುಗಳ ತಿದ್ದುಪಡಿ ಸೇರಿದಂತೆ ಅನೇಕ ಅಕ್ರಮಗಳನ್ನು ಎಸಗಲಾಗಿದೆ ಎಂದು ಹೇಳಿದರು. ನಮಗೆ ಈ ಸರ್ಕಾರದ ಮೇಲೆ ನಂಬಿಕೆಯೇ ಸತ್ತುಹೋಗಿದೆ. ನೋಟಿಫಿಕೇಶನ್ ಮಾಡುತ್ತಾರೆ, ಆದರೆ ಓದುವುದಕ್ಕೆ ಸಮಯವನ್ನೇ ಕೊಡುವುದಿಲ್ಲ. ಉತ್ತರ ಕರ್ನಾಟಕದಿಂದ ಬಂದು ಬೆಂಗಳೂರಿನಲ್ಲಿ ತಿಂಗಳಾನುಗಟ್ಟಲೆ ಕಷ್ಟಪಟ್ಟು ಓದುತ್ತಿದ್ದೇವೆ. ಪೀಜಿಗಳಿಗೆ ಅಣೆಕಟ್ಟಲಾಗಿದೆ ಸಂಕಷ್ಟದಲ್ಲಿದ್ದೇವೆ. ನಮ್ಮ ಜೊತೆ ಕೆಪಿಎಸ್ಸಿ ಚೆಲ್ಲಾಟ ಆಡುತ್ತಿದೆ ಎಂದು ಉತ್ತರ ಕರ್ನಾಟಕದ ಅಭ್ಯರ್ಥಿ ಒಬ್ಬರು ಆರೋಪಿಸಿದರು.

ಯಾವಾಗ ಯಾವ ನೋಟಿಫಿಕೇಶನ್ ಆಗುತ್ತದೆ? ಅದರ ಅರ್ಹತೆ ಮತ್ತು ಮಾನದಂಡಗಳು ಏನು ಎಂಬುದು ಬಗ್ಗೆ ಕೆಪಿಎಸ್ಸಿಗೆ ಅರಿವು ಇಲ್ಲ. ಪದೇ ಪದೇ ಗೊಂದಲ ಉಂಟು ಮಾಡುತ್ತಾರೆ. ನಾವು ಪರೀಕ್ಷೆಗೆ ತಯಾರಾಗುತ್ತಿದ್ದರೆ ಯಾವುದೋ ಒಂದು ದಾಖಲೆಯನ್ನು ವೆಬ್‌ಸೈಟ್ನಲ್ಲಿ ಹಾಕಿ ಗೊಂದಲ ಉಂಟುಮಾಡುತ್ತಾರೆ. ಅದು ಸರಿ ಹೋಗಿ ಇನ್ನೇನು ಪರೀಕ್ಷೆ ಬರೆಯಬೇಕು ಎನ್ನುವ ಸಮಯಕ್ಕೆ ಯಾರೋ ಒಬ್ಬರು ನ್ಯಾಯಾಲಯಕ್ಕೆ ಹೋಗುತ್ತಾರೆ. ಅಲ್ಲಿಗೆ ನಾವು ಶ್ರಮಪಟ್ಟು ಓದಿದ್ದೆಲ್ಲ ವ್ಯರ್ಥವಾಗುತ್ತದೆ ಎಂದು ಇನ್ನೊಬ್ಬ ಅಭ್ಯರ್ಥಿ ಅಳಲು ತೋಡಿಕೊಂಡರು.

#### ಬೆಂಗಳೂರು ಎಲ್ಲರದ್ದು

ಉತ್ತರ ಕರ್ನಾಟಕದ ಮಂದಿ ಬೆಂಗಳೂರಿಗೆ ಬಂದು ಇಲ್ಲೇ ಇದ್ದುಬಿಡುತ್ತಾರೆ, ಇಲ್ಲಿಂದ ವಾಪಸ್ ಹೋಗುವುದೇ ಇಲ್ಲ ಎಂದು ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಕೊಟ್ಟ ಹೇಳಿಕೆಯಿಂದ ನಮಗೆ ನೋವಾಗಿದೆ. ಇಲ್ಲಿ ಕರ್ನಾಟಕ ಎನ್ನುವುದು ಒಂದು. ನಮ್ಮ ಭಾಷೆ ಒಂದೇ. ಉತ್ತರ ಮತ್ತು ದಕ್ಷಿಣ ಎನ್ನುವ ಪ್ರಶ್ನೆಯೇ ಇಲ್ಲ. ಬೆಂಗಳೂರು ಮಹಾನಗರ ನಮ್ಮೆಲ್ಲರದ್ದು. ಯಾರೋ ಒಬ್ಬರಿಗೆ ಸೀಮಿತವಾದ ನಗರವಲ್ಲ. ಹಾಗೆ ನೋಡಿದರೆ ಬೆಂಗಳೂರು ನಗರ ಅಭಿವೃದ್ಧಿ ಹೊಂದಿದೀಯ ಹೊರತು, ಬೆಂಗಳೂರು ಅಕ್ಕಪಕ್ಕದ ಅನೇಕ ಹಳ್ಳಿಗಳು ಉತ್ತರ ಕರ್ನಾಟಕದ ಹಳ್ಳಿಗಳಂತೆ ತೀರಾ ಹಿಂದುಳಿದಿವೆ ಎಂದು ಯಾದಗಿರಿಯ ವಿದ್ಯಾರ್ಥಿನಿ ಒಬ್ಬರು ಬೇಸರ ವ್ಯಕ್ತಪಡಿಸಿದರು.

ಸಿಜೆಪಿಗಳಿಗೆ ಕನ್ನಡಿಗರ ತೆರಿಗೆ ಹಣ ಹೋಗುತ್ತಿದೆ: ಎಚ್.ಡಿ.ಕುಮಾರಸ್ವಾಮಿ
ಗೃಹ ಸಚಿವ ಪ್ರಿಯಾಂಕ್ ಖರ್ಗೆ ವಿಡಿಯೊ ಬಿಡುಗಡೆ ಮಾಡಿದ ಕೇಂದ್ರ ಸಚಿವ

# ದೇಶವನ್ನು ಅಭದ್ರಗೊಳಿಸಲು ರಾಜ್ಯ ಸರಕಾರದಿಂದ ಫಂಡಿಂಗ್

**ಬೆಂಗಳೂರು:** ರಾಷ್ಟ್ರವನ್ನು ಅಭದ್ರಗೊಳಿಸಲು ನಡೆಯುತ್ತಿರುವ ಸಂಚುಗಳಿಗೆ ಕರ್ನಾಟಕ ರಾಜ್ಯದ ಕಾಂಗ್ರೆಸ್ ಸರಕಾರವು ಫಂಡಿಂಗ್ ಮಾಡುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ದೆಹಲಿಯಲ್ಲಿ ನಡೆಯುತ್ತಿರುವ ರಾಷ್ಟ್ರ ವಿರೋಧಿ ಹೋರಾಟಗಳಿಗೆ ಕಾಂಗ್ರೆಸ್‌ನಿಂದ ನೆರವು ಸಿಗುತ್ತಿದೆ ಎಂಬುದನ್ನು ಸ್ವತಃ ರಾಜ್ಯದ ಗೃಹ ಸಚಿವ ಪ್ರಿಯಾಂಕ ಖರ್ಗೆ ಅವರೇ ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ. ಗುರುವಾರ ಖರ್ಗೆ ನೀಡಿರುವ ಹೇಳಿಕೆಯೇ ಇದಕ್ಕೆ ಸಾಕ್ಷಿ. ಅವರು ಹೇಳಿರುವಂತೆ ಕಾಂಗ್ರೆಸ್ ಮತ್ತು ಸಿಜೆಪಿ ಎರಡೂ ಒಂದೇ ಎಂದು ಹೇಳಿದ್ದಾರೆ. ಸಿಜೆಪಿ ಅವರು ಏನು ಬೇಕಾದರೂ ಗಲಾಟೆ ಮಾಡಿದರೂ ನಾವು ಯಾವುದೇ ಕಾನೂನು ಕ್ರಮ ಕೈಗೊಳ್ಳುವುದಿಲ್ಲ ಎನ್ನುವ ಮೂಲಕ ನೇರವಾಗಿ ಗಲಭೆಗೆ ಪ್ರಚೋದನೆ ನೀಡುತ್ತಿದ್ದಾರೆ. ಅವರಿಗೊಂದು ಕಾನೂನು, ಬೇರೆಯವರಿಗೊಂದು ಕಾನೂನು ಇದೆಯೇ ಎಂದು ಪ್ರಶ್ನಿಸಿದರು.

ಜವಾಬ್ದಾರಿ ಸ್ಥಾನದಲ್ಲಿರುವ ಗೃಹ ಸಚಿವರು ಇಂತಹ ಹೇಳಿಕೆ ನೀಡಿರುವುದು ಅಘಾತಕಾರಿ. ರಾಷ್ಟ್ರದಲ್ಲಿ ಎಂತಹ ಅಹಿತಕರ ಘಟನೆಗಳು ನಡೆಯುತ್ತಿವೆ ಎಂಬುದು ಗೊತ್ತಿದೆ. ಇಂತಹ ಸೂಕ್ಷ್ಮ ಪರಿಸ್ಥಿತಿಯಲ್ಲಿ ಪ್ರಿಯಾಂಕ್ ಖರ್ಗೆ ಕೊಟ್ಟಿರುವ ಹೇಳಿಕೆ ಗಂಭೀರವಾದುದು. ಇವರು ಸರಕಾರದ ಹಣ ಅದರಲ್ಲಿಯೂ ಕನ್ನಡಿಗರ ತೆರಿಗೆ ಹಣ ದೆಹಲಿಯ ಗಲಭೆಕೋರರಿಗೆ ರವಾನೆ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಪ್ರತಿಪಕ್ಷಗಳ ಕಾರ್ಯಕರ್ತರ ಮೇಲೆ ಈ ಕಾಂಗ್ರೆಸ್ ಸರಕಾರ ದಬ್ಬಾಳಿಕೆ ನಡೆಸುತ್ತಿದೆ. ಯಾರಾದರೂ ಸಾಮಾಜಿಕ ಜಾಲತಾಣದಲ್ಲಿ ಒಂದು ಪೋಸ್ಟ್ ಹಾಕಿದರೆ ಅವರ ಮೇಲೆ ಕೇಸು ದಾಖಲು ಮಾಡಲಾಗುತ್ತಿದೆ. ಇಂತಹ ಸರಕಾರ ರಾಷ್ಟ್ರದಲ್ಲಿ ಅಶಾಂತಿ ಉಂಟು ಮಾಡುತ್ತಿರುವ ಶಕ್ತಿಗಳಿಗೆ ಫಂಡಿಂಗ್ ಮಾಡುತ್ತಿದೆ ಹಾಗೂ ಅವರ ವಿರುದ್ಧ ಯಾವ ಕ್ರಮವನ್ನು ಕೈಗೊಳ್ಳುವುದಿಲ್ಲ. ಅವರು ಹಾಗೂ ಕಾಂಗ್ರೆಸ್ಸಿನವರು ಇಬ್ಬರೂ ಒಂದೇ ಎನ್ನುವ ಮೂಲಕ ರಾಷ್ಟ್ರ ವಿರೋಧಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದರು.



> ತನಿಖಾ ಅಧಿಕಾರಿಗಳು ಅನಗತ್ಯವಾಗಿ ಸಮಸ್ಯೆ ತಂದಿಟ್ಟುಕೊಂಡರೆ ಮುಂದೆ ಪ್ರತಿಫಲ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದೇನೆಯೇ ಹೊರತು, ತಾನು ಯಾರಿಗೂ ಧಮ್ಕಿ ಹಾಕಿಲ್ಲ. ಇಂತಹ ಮನಃಸ್ಥಿತಿ, ಧಮ್ಕಿ ಹಾಕುವ ಶೈಲಿ ನಿಮ್ಮದು
>
> ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

#### ಖರ್ಗೆಗೆ ತಿರುಗೇಟು ಕೊಟ್ಟ ಎಚ್‌ಡಿಕೆ

ಕೇಂದ್ರದಲ್ಲಿ ತಮಗೆ ಯಾವುದೇ ಕಿಮ್ಮತ್ತು ಇಲ್ಲ ಎಂಬ ಅವರ ಟೀಕೆಗೆ ತಿರುಗೇಟು ನೀಡಿ, ಕನಸಿನಲ್ಲಿ ಯಾರಾದರೂ ಬಂದು ಇವರಿಗೆ ಹೇಳಿದ್ದರಾ ಎಂದು ಲೇವಡಿ ಮಾಡಿದರು. ಕೇಂದ್ರ ಸಚಿವನಾಗಿ ದೆಹಲಿಯಲ್ಲಿ ತಾನು ಯಾವ ರೀತಿ ಕೆಲಸ ಮಾಡಿದ್ದೇನೆ ಎಂದು ಇವರಿಗೆ ಹೇಳಬೇಕಾಗಿಲ್ಲ ಎಂದ ಕುಮಾರಸ್ವಾಮಿ ಅವರು; ಕೇವಲ 200 ಕೋಟಿ ಲಾಭದಲ್ಲಿದ್ದ ಬಿಎಚ್‌ಇಎಲ್ ಕಾರ್ಖಾನೆಯನ್ನು 1500 ಕೋಟಿಗೂ ಹೆಚ್ಚಿನ ಲಾಭ ಗಳಿಸುವಂತೆ ಮಾಡಲಾಗಿದೆ . ಅದೇ ರೀತಿ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ 3,500 ಕೋಟಿ ಲಾಭ ಗಳಿಸುವಲ್ಲಿ ಯಶಸ್ವಿಯಾಗಿದೆ ಹಾಗೂ ಮುಂದಿನ ವರ್ಷಕ್ಕೆ ಕನಿಷ್ಠ 10,000 ಕೋಟಿ ಲಾಭದ ಗುರಿ ಮುಟ್ಟುವಂತೆ ಟಾಸ್ಕ್ ನೀಡಲಾಗಿದೆ ಎಂದು ತಮ್ಮ ಇಲಾಖೆಯ ಸಾಧನೆ ತಿಳಿಸಿದರು. ನಲವತ್ತು ಪರ್ಸೆಂಟ್, ಪೇಸಿಎಂ ಎಂದು ಪೋಸ್ಟರ್ ಅಂಟಿಸಿಕೊಂಡು ಬಂದವರು ಕಳೆದ ಮೂರು ವರ್ಷಗಳಲ್ಲಿ ಅಥವಾ ಈ ಮೂರು ತಿಂಗಳಲ್ಲಿ ಹೊಸ ಮುಖ್ಯಮಂತ್ರಿ ಬಂದು ಏನು ಮಾಡಿದ್ದಾರೆ? ಬಿಡದಿ ರೈತರನ್ನು ಒಕ್ಕಲೆಬ್ಬಿಸುವುದು ಮತ್ತು ನೈಸ್ ಕಂಪನಿ ಲೂಟಿ ಮಾಡುವುದೇ ನಿಮ್ಮ ಟಾಸ್ಕ್ ಆಗಿದೆಯೇ? ನನ್ನ ಕೆಲಸದ ಬಗ್ಗೆ ನನ್ನ ದಾಖಲೆಗಳು ಮಾತನಾಡುತ್ತವೆ, ನಿಮ್ಮಿಂದ ನಾನು ಸರ್ಟಿಫಿಕೇಟ್ ಪಡೆಯಬೇಕಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇ.ಡಿ ತನಿಖೆಯಲ್ಲಿ ಕೆಪಿಎಸ್‌ಸಿಯ ಹಲವು ರೀತಿಯ ಅಕ್ರಮ ಬಹಿರಂಗ

# ಹೆಸರು ಬರೆಯಲು ಬಾರದವನಿಗೂ ಹುದ್ದೆ!

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮವು ದಿನದಿಂದ ದಿನಕ್ಕೆ ತಿರುವು ಪಡೆದುಕೊಳ್ಳುತ್ತಿದೆ. ಜಾರಿ ನಿರ್ದೇಶನಾಲಯ (ಇ.ಡಿ) ನಡೆಸುತ್ತಿರುವ ತನಿಖೆಯಲ್ಲಿ ಈ ಹಗರಣವು ಕೇವಲ ಪ್ರಶ್ನೆಪತ್ರಿಕೆ ಸೋರಿಕೆಗೆ ಸೀಮಿತವಾಗಿರದೆ, ವ್ಯವಸ್ಥಿತವಾದ ಅಕ್ರಮ ನೇಮಕಾತಿ ಜಾಲವಾಗಿದ್ದು, ಇಂಗ್ಲಿಷ್‌ನಲ್ಲಿ ತಮ್ಮ ಹೆಸರು ಬರೆಯಲು ಬಾರದವರಿಗೂ ಸರಕಾರಿ ಉದ್ಯೋಗ ಕೊಡಿಸಿರುವ ಅತೀ ದೊಡ್ಡ ವಂಚನೆಯನ್ನು ಇ.ಡಿ ಪತ್ತೆಹಚ್ಚಿದೆ.



ಕೆಪಿಎಸ್‌ಸಿ ಸದಸ್ಯರೇ ನೇರವಾಗಿ ಈ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಪ್ರಭಾವಿ ಅಭ್ಯರ್ಥಿಗಳಿಗೆ ಸಾಮಾನ್ಯ ಪರೀಕ್ಷಾ ಕೇಂದ್ರಗಳಲ್ಲಿ ಕುಳಿತು ಪರೀಕ್ಷೆ ಬರೆಯುವ ಕಷ್ಟ ತಪ್ಪಿಸಲು, ಇವರೇ ಐಷಾರಾಮಿ ಫೈವ್‌ಸ್ಟಾರ್ ಹೋಟೆಲ್‌ಗಳನ್ನು 'ಪರೀಕ್ಷಾ ಕೇಂದ್ರ'ಗಳಾಗಿ ಬಳಸಿಕೊಂಡಿದ್ದಾರೆ. ಪರೀಕ್ಷೆಗೂ ಮುನ್ನವೇ ಆಯ್ಕೆಯಾದ ಅಭ್ಯರ್ಥಿಗಳಿಗೆ ಒಂದು ಚೀಟಿಯಲ್ಲಿ ಉತ್ತರಗಳನ್ನು ಸಿದ್ಧಪಡಿಸಿ ನೀಡಲಾಗುತ್ತಿತ್ತು. ಒಂದು ವೇಳೆ ಅದನ್ನೂ ಬರೆಯಲು ಸಾಧ್ಯವಾಗದ ಅಭ್ಯರ್ಥಿಗಳಿಗೆ, ಆಯೋಗದ ಸದಸ್ಯರೇ ಖುದ್ದು ಪ್ರಶ್ನೆಪತ್ರಿಕೆ ಮತ್ತು ಓಎಂಆರ್ ಶೀಟ್ ಒದಗಿಸಿ, ಹೋಟೆಲ್‌ನಲ್ಲೇ ಪರೀಕ್ಷೆ ಬರೆಸುವ ವಿಶೇಷ ಸಂಚು ಹೂಡಿದ್ದರು.

ಈ ಹಗರಣದ ಅತ್ಯಂತ ಆಘಾತಕಾರಿ ಅಂಶವೆಂದರೆ, ಅರ್ಹತೆ ಇಲ್ಲದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವುದು. ಇ.ಡಿ ತನಿಖೆ ವೇಳೆ ಪತ್ತೆಯಾದ ಅಂಶವೊಂದರ ಪ್ರಕಾರ, ಸರಕಾರಿ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಯೊಬ್ಬನಿಗೆ ಕನಿಷ್ಠ ತನ್ನ ಹೆಸರು ಮತ್ತು ವಿಳಾಸವನ್ನು ಇಂಗ್ಲಿಷ್‌ನಲ್ಲಿ ಬರೆಯಲು ಬರುತ್ತಿರಲಿಲ್ಲ. ಅಂತಹ ವ್ಯಕ್ತಿಗೆ ಉನ್ನತ ಸರಕಾರಿ ಹುದ್ದೆ ಕೊಡಿಸಲಾಗಿದೆ. ಇಂಗ್ಲಿಷ್ ಬರೆಯಲು ಬಾರದ ಅಭ್ಯರ್ಥಿಯು ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದು ಹೇಗೆ? ಎಂಬ ಪ್ರಶ್ನೆ ಇದೀಗ ತನಿಖೆಯ ದಿಕ್ಕನ್ನು ಬದಲಿಸಿದೆ.

#### ಇ.ಡಿ ತನಿಖೆ ಚುರುಕು

ಜಾರಿ ನಿರ್ದೇಶನಾಲಯವು ಈ ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದು, ಅಕ್ರಮದಲ್ಲಿ ಭಾಗಿಯಾದ ಹೋಟೆಲ್‌ಗಳ ಸಿಬ್ಬಂದಿ, ಆಯೋಗದ ಸದಸ್ಯರು ಮತ್ತು ಫಲಾನುಭವಿ ಅಭ್ಯರ್ಥಿಗಳ ಜಾಡು ಹಿಡಿದಿದೆ. ಹೋಟೆಲ್‌ಗಳಲ್ಲಿ ನಡೆದ ಪರೀಕ್ಷೆಗಳ ಬಗ್ಗೆ ದೃಢವಾದ ಸಾಕ್ಷ್ಯಗಳನ್ನು ಸಂಗ್ರಹಿಸುತ್ತಿರುವ ಅಧಿಕಾರಿಗಳು, ಈ ಅಕ್ರಮಕ್ಕೆ ಪರದೆಯ ಹಿಂದಿನಿಂದ ಸಹಕರಿಸಿದ ರಾಜಕೀಯ ಪ್ರಭಾವಿಗಳನ್ನೂ ವಿಚಾರಣೆಗೆ ಒಳಪಡಿಸಲು ಸಿದ್ಧತೆ ನಡೆಸಿದ್ದಾರೆ. ಈ ಹಗರಣವು ಲಕ್ಷಾಂತರ ಯುವಕರ ಭವಿಷ್ಯದ ಜತೆ ಆಟವಾಡಿದೆ. ಹಗಲಿರುಳು ಕಷ್ಟಪಟ್ಟು ಓದಿ, ಗ್ರಂಥಾಲಯಗಳಲ್ಲಿ ನಿದ್ದೆ ಮಾಡಿ ಪರೀಕ್ಷೆ ಬರೆದ ಸಾವಿರಾರು ಪ್ರತಿಭಾವಂತ ಯುವಕರಿಗೆ ಈ ನೇಮಕಾತಿ ಅಕ್ರಮದಿಂದ ಅನ್ಯಾಯವಾಗಿದೆ.

ಕ್ಯಾನ್ಸರ್ ಟ್ರೀಟ್‌ಮೆಂಟ್ ಸರ್ವಿಸಸ್ ಇಂಟರ್‌ನ್ಯಾಷನಲ್‌ನ ಅಧ್ಯಕ್ಷ ಡಾ. ದಿಲೀಪ್ ಮಂಗ್ಸುಲಿ

# ಆರೋಗ್ಯ ಕ್ಷೇತ್ರದಲ್ಲಿ ಎಐ, ರೊಬೊಟಿಕ್ಸ್ ತಂತ್ರಜ್ಞಾನ ಕ್ರಾಂತಿ

**ಬೆಂಗಳೂರು:** ಆರೋಗ್ಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ , ಡಿಜಿಟಲ್ ತಂತ್ರಜ್ಞಾನ ಮತ್ತು ಸಾಫ್ಟ್‌ವೇರ್‌ಗಳ ಬಳಕೆಯಿಂದ ಮಹತ್ವದ ಆವಿಷ್ಕಾರಗಳು ನಡೆಯುತ್ತಿದ್ದು, ಇವು ವೈದ್ಯಕೀಯ ಸೇವೆಗಳ ಸ್ವರೂಪವನ್ನೇ ಬದಲಿಸುತ್ತಿವೆ ಎಂದು ಕ್ಯಾನ್ಸರ್ ಟ್ರೀಟ್‌ಮೆಂಟ್ ಸರ್ವಿಸಸ್ ಇಂಟರ್‌ನ್ಯಾಷನಲ್‌ನ ಅಧ್ಯಕ್ಷ ಡಾ. ದಿಲೀಪ್ ಮಂಗ್ಸುಲಿ ಅಭಿಪ್ರಾಯಪಟ್ಟರು.

ಯಲಹಂಕದ ನಿಟ್ಟೆ ಮೀನಾಕ್ಷಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ನಿಟ್ಟೆ ಸಹಯೋಗದ ನಾವೀನ್ಯತಾ ಕೇಂದ್ರದ ವತಿಯಿಂದ ಆಯೋಜಿಸಿದ್ದ ಎರಡು ದಿನಗಳ ಡೀಪ್ ಟೆಕ್ ಇನ್ನೋವೇಷನ್ ಸಮಿಟ್-2026ರಲ್ಲಿ ಸಿಐಸಿ ಉತ್ಪನ್ನ ಅಭಿವೃದ್ಧಿ ಸ್ಟುಡಿಯೋ ಉದ್ಘಾಟಿಸಿ ಮಾತನಾಡಿ, ಗ್ರಾಮೀಣ ಪ್ರದೇಶಗಳ ಆರೋಗ್ಯ ಶಿಬಿರಗಳಲ್ಲಿ ಕ್ಷಯರೋಗ ಪತ್ತೆಹಚ್ಚಲು ಕೆಲವೇ ನಿಮಿಷಗಳಲ್ಲಿ ಫಲಿತಾಂಶ ನೀಡುವ ಎಐ ಆಧಾರಿತ ಪೋರ್ಟಬಲ್ ಎಕ್ಸ್‌ರೇ ಸಾಧನಗಳು ಬಳಕೆಯಾಗುತ್ತಿವೆ. ಐಐಟಿಗಳ ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ನ್ಯಾನೊರೊಬೋಟ್‌ಗಳು ಕ್ಯಾನ್ಸರ್ ಕೋಶ ನಿಖರವಾಗಿ ಗುರಿಯಾಗಿಸಿಕೊಂಡು ನಾಶಪಡಿಸುವ ಸಾಮರ್ಥ್ಯ ಹೊಂದಿವೆ. ಇಂತಹ ತಂತ್ರಜ್ಞಾನ ಭಾರತೀಯ ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಸಾಧ್ಯತೆ ಸೃಷ್ಟಿಸುತ್ತಿವೆ ಎಂದರು. ಜಾಗತಿಕವಾಗಿ ಅರ್ಧದಷ್ಟು ಜನರಿಗೆ ಸಮರ್ಪಕ ಆರೋಗ್ಯ ಸೇವೆಗಳು ಲಭ್ಯವಿಲ್ಲ. 2030ರ ವೇಳೆಗೆ 1.8 ಕೋಟಿ ಆರೋಗ್ಯ ಕಾರ್ಯಕರ್ತರ ಕೊರತೆ ಉಂಟಾಗುವ ಅಂದಾಜಿದೆ. ಈ ಸವಾಲು ಎದುರಿಸಲು ಡೀಪ್ ಟೆಕ್ ತಂತ್ರಜ್ಞಾನ ಆಧಾರಿತ ಆವಿಷ್ಕಾರಗಳು ಅತ್ಯಂತ ಮಹತ್ವದ್ದಾಗಿವೆ ಎಂದರು. ಐಐಟಿ ದೆಹಲಿಯ ತಂತ್ರಜ್ಞಾನ ನಾವೀನ್ಯತಾ ಕೇಂದ್ರವಾದ ಐ-ಹಬ್ ಫೌಂಡೇಷನ್ ಫಾರ್ ಕೊಬೊಟಿಕ್ಸ್‌ನ ಹಿರಿಯ ಉಪಾಧ್ಯಕ್ಷ ನರೇಂದ್ರ ಗೌರ್, ನಾವೀನ್ಯತಾ ವ್ಯವಸ್ಥೆಯ ಬೆಳವಣಿಗೆಗೆ ಬಂಡವಾಳ ಮತ್ತು ತಂತ್ರಜ್ಞಾನ ಮಾತ್ರ ಸಾಕಾಗುವುದಿಲ್ಲ. ಹೊಸ ಆಲೋಚನೆ ಗಳನ್ನು ಕಾರ್ಯರೂಪಕ್ಕೆ ತರುವ ಧೈರ್ಯ, ವೈಜ್ಞಾನಿಕ ಸಂಶೋಧನೆಗಳನ್ನು ಸಮಾಜಕ್ಕೆ ಪ್ರಯೋಜನ ವಾಗುವ ಉತ್ಪನ್ನಗಳಾಗಿ ಪರಿವರ್ತಿಸುವ ಮನೋಭಾವವೂ ಅಗತ್ಯ ಎಂದು.



ಸಿಐಸಿ ಉತ್ಪನ್ನ ಅಭಿವೃದ್ಧಿ ಸ್ಟುಡಿಯೋವನ್ನು ಕ್ಯಾನ್ಸರ್ ಟ್ರೀಟ್‌ಮೆಂಟ್ ಸರ್ವಿಸಸ್ ಇಂಟರ್‌ನ್ಯಾಷನಲ್‌ನ ಅಧ್ಯಕ್ಷ ಡಾ. ದಿಲೀಪ್ ಮಂಗ್ಸುಲಿ ಉದ್ಘಾಟಿಸಿದರು. ಈ ವೇಳೆ ಐ-ಹಬ್ ಫೌಂಡೇಷನ್ ಫಾರ್ ಕೊಬೊಟಿಕ್ಸ್‌ನ ಹಿರಿಯ ಉಪಾಧ್ಯಕ್ಷ ನರೇಂದ್ರ ಗೌರ್, ನಿಟ್ಟೆ ಮೀನಾಕ್ಷಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಾಂಶುಪಾಲ ಡಾ. ಎಚ್.ಸಿ. ನಾಗರಾಜ್ ಸೇರಿದಂತೆ ಇನ್ನಿತರರು ಇದ್ದರು.

ಮಧ್ಯಪ್ರಾಚ್ಯದ ಸುರಕ್ಷತೆ ಮತ್ತು ಸ್ಥಿರತೆಯಲ್ಲಿ ಭಾರತಕ್ಕೆ ಅತ್ಯಂತ ಹೆಚ್ಚಿನ ಹಿತಾಸಕ್ತಿ ಇದೆ: ಹರೀಶ್ ಪರ್ವತನೇನಿ

# ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಶತ್ರುತ್ವ: ಭಾರತ ಕಳವಳ

**ನ್ಯೂಯಾರ್ಕ್:** ಮಧ್ಯಪ್ರಾಚ್ಯದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹಗೆತನ ಮತ್ತು ಯುದ್ಧದ ವಾತಾವರಣದ ಕುರಿತು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತ ತೀವ್ರ ಕಳವಳ ವ್ಯಕ್ತಪಡಿಸಿದೆ.



ನಾಗರಿಕ ಮೂಲಸೌಕರ್ಯಗಳು, ವಾಣಿಜ್ಯ ಹಡಗುಗಳು ಮತ್ತು ವಿಶ್ವಸಂಸ್ಥೆಯ ಶಾಂತಿಪಾಲಕರ ಮೇಲಿನ ನಿರಂತರ ದಾಳಿಗಳನ್ನು ಭಾರತವು ಕಟುವಾಗಿ ಖಂಡಿಸಿದೆ. ವಿಶ್ವಸಂಸ್ಥೆಗೆ ಭಾರತದ ಖಾಯಂ ಪ್ರತಿನಿಧಿಯಾದ ರಾಯಭಾರಿ ಹರೀಶ್ ಪರ್ವತನೇನಿ ಅವರು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಮಧ್ಯಪ್ರಾಚ್ಯದ ಸುರಕ್ಷತೆ ಮತ್ತು ಸ್ಥಿರತೆಯಲ್ಲಿ ಭಾರತಕ್ಕೆ ಅತ್ಯಂತ ಹೆಚ್ಚಿನ ಹಿತಾಸಕ್ತಿ ಇದೆ ಎಂದು ಸ್ಪಷ್ಟಪಡಿಸಿದ್ದಾರೆ.

ವಾಣಿಜ್ಯ ಹಡಗುಗಳು ಮತ್ತು ನಾವಿಕರ ಮೇಲಿನ ದಾಳಿಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಭಾರತ ಮತ್ತು ಲೈಬೀರಿಯಾ ಕಳೆದ ತಿಂಗಳು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಸಂದರ್ಭದಲ್ಲಿ ಹಡಗುಗಳು ಮತ್ತು ನಾವಿಕರ ಸುರಕ್ಷತೆಗಾಗಿ ಸ್ನೇಹಿತರ ಗುಂಪು ಎಂಬ ವೇದಿಕೆಯನ್ನು ಆರಂಭಿಸಿವೆ ಎಂದು ಅವರು ತಿಳಿಸಿದರು. ಈ ಉಪಕ್ರಮಕ್ಕೆ 23 ಸದಸ್ಯ ರಾಷ್ಟ್ರಗಳು ಭಾರತ ಮತ್ತು ಲೈಬೀರಿಯಾದೊಂದಿಗೆ ಕೈಜೋಡಿಸಿವೆ. ಪದೇಪದೇ ನಡೆಯುತ್ತಿರುವ ದಾಳಿಗಳನ್ನು ತಡೆಯಲು ಮತ್ತು ನಾವಿಕರ ಹಕ್ಕುಗಳನ್ನು ರಕ್ಷಿಸಲು ಹೆಚ್ಚಿನ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಈ ರಾಷ್ಟ್ರಗಳು ಬೆಂಬಲ ನೀಡಲು ಸಿದ್ಧವಾಗಿವೆ ಎಂದು ಹೇಳಿದ್ದಾರೆ.

ವಿಶ್ವದ ವಾಣಿಜ್ಯ ಹಡಗುಗಳಲ್ಲಿ ಸುಮಾರು 20 ಲಕ್ಷ ನಾವಿಕರು ಕಾರ್ಯನಿರ್ವಹಿಸುತ್ತಿದ್ದು, ಜಾಗತಿಕ ವ್ಯಾಪಾರದ ಐದನೇ ನಾಲ್ಕು ಭಾಗದಷ್ಟು ವಹಿವಾಟು ಸಮುದ್ರ ಮಾರ್ಗದ ಮೂಲಕ ನಡೆಯುತ್ತದೆ. ಈ ಹಿನ್ನೆಲೆಯಲ್ಲಿ ಸ್ನೇಹಿತರ ಗುಂಪು ಎಲ್ಲರನ್ನೂ ಒಳಗೊಳ್ಳುವ, ಸ್ವಯಂಪ್ರೇರಿತ ಹಾಗೂ ಕಾರ್ಯಪ್ರಧಾನ ವೇದಿಕೆಯಾಗಿದೆ. ಸಹಕಾರವನ್ನು ಮತ್ತಷ್ಟು ಬಲಪಡಿಸುವುದು ಮತ್ತು ಪ್ರಾಯೋಗಿಕ ಕ್ರಮಗಳನ್ನು ಉತ್ತೇಜಿಸುವುದು ಇದರ ಉದ್ದೇಶವಾಗಿದೆ ಎಂದು ಹರೀಶ್ ಪರ್ವತನೇನಿ ವಿವರಿಸಿದ್ದಾರೆ.

ಕಳೆದ ತಿಂಗಳು ದೆಹಲಿಯಲ್ಲಿ ನಡೆದ ಬ್ರಿಕ್ಸ್ ನಾಯಕರ ಶೃಂಗಸಭೆಯನ್ನು ಉಲ್ಲೇಖಿಸಿದ ಅವರು, ಪ್ರಧಾನಿ ಮೋದಿ ಅವರು ನಾವಿಕರ ತುರ್ತು ನೆರವು ಜಾಲ ಸ್ಥಾಪಿಸುವ ಪ್ರಸ್ತಾಪ ಮುಂದಿಟ್ಟಿದ್ದರು ಎಂದು ಸ್ಮರಿಸಿದರು. ಈ ಜಾಲವು ಸಂಬಂಧಪಟ್ಟ ದೇಶಗಳ ಸಮುದ್ರ ವ್ಯವಹಾರಗಳ ಅಧಿಕಾರಿಗಳು ಮತ್ತು ರಾಯಭಾರ ಕಚೇರಿಗಳನ್ನು ಸಂಪರ್ಕಿಸಲಿದೆ. ಅಗತ್ಯವಿದ್ದಾಗ ತುರ್ತು ಸಂದೇಶ ರವಾನೆ, ವೈದ್ಯಕೀಯ ನೆರವು, ಕುಟುಂಬದವರೊಂದಿಗೆ ಸಂಪರ್ಕ ಹಾಗೂ ಸ್ಥಳಾಂತರಕ್ಕೆ ಸಹಾಯ ಮಾಡುವ ಉದ್ದೇಶವನ್ನು ಹೊಂದಿದೆ ಎಂದಿದ್ದಾರೆ.

ಸಮುದ್ರ ಸಂಚಾರ ಮತ್ತು ನಾವಿಕರ ಮೇಲಿನ ದಾಳಿಗಳನ್ನು ಭಾರತ ಬಲವಾಗಿ ಖಂಡಿಸುತ್ತದೆ. ದಾಳಿಗೆ ಒಳಗಾಗುತ್ತಿರುವ ನಾವಿಕರಲ್ಲಿ ಅನೇಕರು ಭಾರತೀಯ ಪ್ರಜೆಗಳಾಗಿದ್ದಾರೆ. ಬಾಬ್ ಎಲ್-ಮಂದೇಬ್ ಜಲಸಂಧಿ ಮತ್ತು ದಕ್ಷಿಣ ಕೆಂಪು ಸಮುದ್ರದ ರಕ್ಷಣೆ ಅಂತಾರಾಷ್ಟ್ರೀಯ ಸಮುದಾಯದ ಹಂಚಿಕೆಯ ಜವಾಬ್ದಾರಿಯಾಗಿದೆ.

#### ಭಾರತದಿಂದ 5.2 ಕೋಟಿ ಡಾಲರ್ ನೆರವು

ಪ್ಯಾಲೆಸ್ತೀನ್ ನಿರಾಶ್ರಿತರಿಗಾಗಿ ಕಾರ್ಯನಿರ್ವಹಿಸುವ ವಿಶ್ವಸಂಸ್ಥೆಯ ಪರಿಹಾರ ಮತ್ತು ಕಾರ್ಯ ಸಂಸ್ಥೆಗೆ ಭಾರತವು ಪ್ರಮುಖ ಉದಯೋನ್ಮುಖ ದಾನ ರಾಷ್ಟ್ರಗಳಲ್ಲಿ ಒಂದಾಗಿದೆ. ಈ ಸಂಸ್ಥೆಗೆ ಭಾರತ ಒಟ್ಟು 5.2 ಕೋಟಿ ಡಾಲರ್‌ಗಿಂತಲೂ ಹೆಚ್ಚಿನ ಹಣಕಾಸಿನ ನೆರವು ನೀಡಿದೆ. ಅಲ್ಲದೆ, ದೆಹಲಿ ನೀಡಿರುವ ಅನುದಾನವನ್ನು ಅಗತ್ಯಗಳಿಗೆ ಅನುಗುಣವಾಗಿ ಬಳಸಿಕೊಳ್ಳಲು ಸಂಸ್ಥೆಗೆ ಕಾರ್ಯಾಚರಣೆಯ ಸ್ವಾತಂತ್ರ್ಯವನ್ನೂ ಒದಗಿಸಲಾಗಿದೆ ಎಂದು ಹರೀಶ್ ಪರ್ವತನೇನಿ ಹೇಳಿದ್ದಾರೆ.

# ಕಾಂಗ್ರೆಸ್‌ನಿಂದ ದೇಶದಲ್ಲಿ ಅರಾಜಕತೆ: ರಾಜನಾಥ್

**ಲಖನೌ:** ದೆಹಲಿಯಲ್ಲಿನ ಪ್ರಸ್ತುತ ಪರಿಸ್ಥಿತಿಯು ಸಾಂವಿಧಾನಿಕ ಮಾರ್ಗಗಳ ಬದಲಾಗಿ, ಅರಾಜಕತೆಯ ಸೃಷ್ಟಿಸುವ ಪ್ರಯತ್ನವಾಗಿದೆ. ಇದು ಖಂಡನೀಯ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಆರೋಪಿಸಿದ್ದಾರೆ. ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಬಾಂಗ್ಲಾದೇಶದಲ್ಲಿ ನಡೆದಂತೆ ನಮ್ಮ ದೇಶದಲ್ಲೂ ಸರಕಾರ ಬದಲಾವಣೆ ಮಾಡುವ ಪ್ರಯತ್ನವನ್ನು ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಯತ್ನಿಸುತ್ತಿದೆ. ವಿಪಕ್ಷಗಳು ದೇಶದ ಯುವಜನತೆಯನ್ನು ದಾಳಗಳಾಗಿ ಬಳಕೆ ಮಾಡುತ್ತಿದೆ ಎಂದು ಟೀಕಿಸಿದ್ದಾರೆ. ಕಳೆದ ಕೆಲವು ದಿನಗಳಿಂದ ದೆಹಲಿಯಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಹಲವು ಗಂಭೀರ ಪ್ರಶ್ನೆಗಳನ್ನು ಮೂಡಿಸುತ್ತಿದೆ. ಕಾಂಗ್ರೆಸ್ ಮತ್ತು ಅದರ ರಾಜಕೀಯ ಮೈತ್ರಿ ಪಕ್ಷಗಳು ನೇರವಾಗಿ ಮತ್ತು ತಮ್ಮ ಅಂಗಸಂಸ್ಥೆಗಳ ಮೂಲಕ ಯುವಜನರ ಶಕ್ತಿಯನ್ನು ರಚನಾತ್ಮಕ ಚಟುವಟಿಕೆಗಳು ಮತ್ತು ರಾಷ್ಟ್ರ ನಿರ್ಮಾಣದ ಕಡೆಗೆ ಬಳಸುವ ಬದಲು, ರಾಜಕೀಯ ಸಂಘರ್ಷ ಮತ್ತು ಅರಾಜಕತೆ ಸೃಷ್ಟಿಗೆ ಬಳಸುವ ಪ್ರಯತ್ನ ನಡೆಯುತ್ತಿದೆ ಎಂದಿದ್ದಾರೆ. ದೇಶದ ಯುವಜನರನ್ನು ಅರಾಜಕತೆಯ ರಾಜಕಾರಣದ ದಾಳವಾಗಿ ಬಳಸುವ ಪ್ರಯತ್ನ ಸಾಗಿದೆ ಎಂದು ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ.

**ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್.,**
**ನೋಂದಾಯಿತ ಕಛೇರಿ :** ಸಂ. 19, 2ನೇ ಮುಖ್ಯ ರಸ್ತೆ, ಪೀಣ್ಯ 1ನೇ ಸ್ಟೇಜ್, ಫೇಸ್-1, ಪೀಣ್ಯ, ಬೆಂಗಳೂರು – 560058. **ದೂರವಾಣಿ :** 080 28397256; **ಫ್ಯಾಕ್ಸ್ :** 080 28396727; **ವೆಬ್‌ಸೈಟ್ :** www.kirloskarelectric.com
**ಇ-ಮೇಲ್ :** investors@kirloskarelectric.com
**CIN :** L31100KA1946PLC000415

**ಸದಸ್ಯರಿಗೆ ಸೂಚನೆ [ಕಂಪನಿಗಳ ಕಾಯ್ದೆ, 2013ರ ಕಲಂ 201(2) ರ ಅಡಿಯಲ್ಲಿ]**

ಕಂಪನಿಗಳ ಕಾಯ್ದೆ, 2013ರ ಕಲಂ 201(2)ರ ಅನ್ವಯ ಈ ಮೂಲಕ ಸೂಚನೆ ನೀಡುವುದೇನೆಂದರೆ, ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್ ("ಕಂಪನಿ") ಕಂಪನಿಗಳ ಕಾಯ್ದೆ 2013ರ ಕಲಂ 196 ಮತ್ತು ಅನುಸೂಚಿ V ಅಡಿಯಲ್ಲಿ ಜಾನಕಿ ಕಿರ್ಲೋಸ್ಕರ್ (ಡಿಐಎನ್: 00309238) ಅವರನ್ನು ಜಂಟಿ ವ್ಯವಸ್ಥಾಪಕ ನಿರ್ದೇಶಕರಾಗಿ (Joint Managing Director) ನೇಮಕ ಮಾಡಲು ಕೇಂದ್ರ ಸರ್ಕಾರದ ಅನುಮೋದನೆ ಕೋರಿ ಅರ್ಜಿ ಸಲ್ಲಿಸಲು ಉದ್ದೇಶಿಸಿದೆ.

79ನೇ ವಾರ್ಷಿಕ ಮಹಾಸಭೆಯಲ್ಲಿ (AGM) ವಿಶೇಷ ನಿರ್ಣಯದ ಮೂಲಕ ಸದಸ್ಯರಿಂದ ಅವರ ಮೂರು ವರ್ಷಗಳ ಅವಧಿಯ ನೇಮಕಾತಿ (26 ಮೇ 2026 ರಿಂದ ಜಾರಿಗೆ ಬರುವಂತೆ) ಮತ್ತು ಸಂಭಾವನೆಗೆ ಅನುಮೋದನೆ ದೊರೆತಿದ್ದರೂ, ಕೇಂದ್ರ ಸರ್ಕಾರದ ಮಂಜೂರಾತಿಯನ್ನು ಕೋರಲಾಗುತ್ತಿದೆ. ಜಾನಕಿ ಕಿರ್ಲೋಸ್ಕರ್ ಅವರು ತಮ್ಮ ನೇಮಕಾತಿಗೆ ಮುಂಚಿತವಾಗಿ ನಿರಂತರ ಹನ್ನೆರಡು ತಿಂಗಳ ಅವಧಿಯವರೆಗೆ ಭಾರತದಲ್ಲಿ ನೆಲೆಸಿರುವುದಿಲ್ಲವಾದ್ದರಿಂದ, ಇದು ಸದರಿ ಕಂಪನಿಗಳ ಕಾಯ್ದೆಯ ಅನುಸೂಚಿ V ರ ಭಾಗ I ರ ನಿಬಂಧನೆಗಳಿಗಿಂತ ಭಿನ್ನವಾಗಿದ್ದು (ವ್ಯತ್ಯಾಸಗೊಂಡಿದ್ದು), ಈ ಕಾರಣದಿಂದಾಗಿ ಸದರಿ ಅನುಮೋದನೆ ಅಗತ್ಯವಾಗಿದೆ.

ಈ ಸೂಚನೆಯು ಕಂಪನಿಯ ಜಾಲತಾಣವಾದ www.kirloskarelectric.com ನಲ್ಲಿ ಹಾಗೂ ಷೇರು ವಿನಿಮಯ ಕೇಂದ್ರಗಳ ಜಾಲತಾಣಗಳಾದ www.bseindia.com ಮತ್ತು www.nseindia.com ನಲ್ಲೂ ಲಭ್ಯವಿರುತ್ತದೆ.

ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್‌ನ ಪರವಾಗಿ,

ಸ್ಥಳ : ಬೆಂಗಳೂರು
ದಿನಾಂಕ : ಅಕ್ಟೋಬರ್ 16, 2026

ಮಹಾಬಲೇಶ್ವರ ಭಟ್
ಕಂಪನಿ ಕಾರ್ಯದರ್ಶಿ

ಕಾವೇರಿ ಆರತಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಲನೆ | ಜೀವನದಿ ಕಾವೇರಿ ಮಾತೆಯಲ್ಲಿ ಪ್ರಾರ್ಥನೆ

# ರಾಜ್ಯಕ್ಕೆ ಎದುರಾಗಿರುವ ಬರ ಸಮಸ್ಯೆ ನಿವಾರಣೆಯಾಗಲಿ

**ಶ್ರೀರಂಗಪಟ್ಟಣ:** ರಾಜ್ಯಕ್ಕೆ ಎದುರಾಗಿರುವ ಬರ ಸಮಸ್ಯೆ ನಿವಾರಣೆಯಾಗಲಿ, ರಾಜ್ಯ ಸಮೃದ್ಧವಾಗಲಿ ಹಾಗೂ ರಾಜ್ಯದ ಜನರಿಗೆ ಒಳಿತಾಗಲಿ ಎಂದು ಸಿಎಂ ಡಿ.ಕೆ ಶಿವಕುಮಾರ್ ಜೀವನದಿ ಕಾವೇರಿ ಮಾತೆಯಲ್ಲಿ ಪ್ರಾರ್ಥಿಸಿದರು.

ತಾಲೂಕಿನ ಕೆ.ಆರ್. ಎಸ್ ಅಣೆಕಟ್ಟಿನ ಬೃಂದಾವನ ಉದ್ಯಾನದಲ್ಲಿ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿ ಕಾವೇರಿ ಆರತಿ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಿದರು. ನಂತರ ರಾಜ್ಯದ ವಿವಿಧ ಭಾಗಗಳ ಕಲಾ ತಂಡಗಳ ಪ್ರದರ್ಶನವನ್ನು ವೀಕ್ಷಣೆ ಮಾಡಿದರು.

ಧಾರ್ಮಿಕ ದತ್ತಿ ಇಲಾಖೆಯ ಸ್ಥಳೀಯ 13 ವೈದಿಕರ ತಂಡವು ದಕ್ಷಿಣ ಭಾರತದ ಶೈಲಿಯಲ್ಲಿ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿತು. ಮೊದಲು ವಾತಾಪಿ ಗಣಪತಿಂ ಭಜೆ ಮಂಗಳವಾದ್ಯದಿಂದ ಪೂಜೆ ಪ್ರಾರಂಭವಾಗಿ, ಕಾವೇರಿ ಪ್ರಾರ್ಥನೆ, ಗಣಪತಿ ಪ್ರಾರ್ಥನೆ, ಗುರು ಪ್ರಾರ್ಥನೆ, ಸಂಕಲ್ಪ ನೆರವೇರಿಸಲಾಯಿತು.

ನಂತರ ಕಾವೇರಿ ಸ್ತೋತ್ರದ ಮೂಲಕ ತೀರ್ಥ ಪೂಜೆ ಮಾಡಿ ಬಾಗಿನ ಅರ್ಪಣೆ ಮಾಡಲಾಯಿತು. ಬ್ರಹ್ಮ, ವಿಷ್ಣು, ಮಹೇಶ್ವರರ ಪ್ರಾರ್ಥನೆ, ಚಾಮರ ಸೇವೆ ಬಳಿಕ, ಮೂರು ದಿಕ್ಕಿಗೂ ಶಂಖನಾದ, ಧೂಪದ ಆರತಿ ಹಾಗೂ ಮಂತ್ರ ಪುಷ್ಪ ಪಠಣ ಮಾಡಲಾಯಿತು. ಬಳಿಕ ಕುಂಭಾರತಿ, ನಾಗಾರತಿ, ಕಾವೇರಿ ಆರತಿಯೊಂದಿಗೆ ಪೂಜಾ ಕೈಂಕರ್ಯ ಕೈಗೊಳ್ಳಲಾಯಿತು. ಶಂಖನಾದ, ಮಂತ್ರ ಘೋಷಗಳ ಮೂಲಕ ಕಾವೇರಿ ತಾಯಿಗೆ ವಿವಿಧ ಬಗೆಯ ಆರತಿ ಬೆಳಗಿದ ವರ್ಣರಂಜಿತ ಈ ದೃಶ್ಯವನ್ನು ಕಂಡು ನೆರೆದಿದ್ದ ಜನ ಭಕ್ತಿ ಪರವಶರಾದರು.

ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ಸೋಮೇಶ್ವರ ಸ್ವಾಮೀಜಿ, ಕೆಂಗೇರಿ ಒಕ್ಕಲಿಗರ ಮಠದ ಶ್ರೀಡಾ.ನಿಶ್ಚಲಾನಂದನಾಥ ಸ್ವಾಮೀಜಿ ಹಾಗೂ ಕಾಗಿನೆಲೆ ಕನಕ ಗುರುಪೀಠದ (ಮೈಸೂರು ವಿಭಾಗ) ಶಿವಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಚಿವರಾದ ಎನ್.ಚಲುವರಾಯಸ್ವಾಮಿ, ಪಿ.ಎಂ.ನರೇಂದ್ರಸ್ವಾಮಿ, ಶಿವಲಿಂಗೇಗೌಡ, ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್, ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ ಇದ್ದರು.



ಮಂಡ್ಯದ ಕೆ.ಆರ್.ಎಸ್‌ನಲ್ಲಿ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಾವೇರಿ ಆರತಿಗೆ ಚಾಲನೆ ನೀಡಿದರು. ಈ ವೇಳೆ ಪತ್ನಿ ಉಷಾ ಡಿ.ಕೆ.ಶಿವಕುಮಾರ್, ಸಚಿವ ಎನ್.ಚಲುವರಾಯಸ್ವಾಮಿ, ಶಾಸಕ ರಮೇಶ್ ಬಂಡಿಸಿದ್ದೇಗೌಡ, ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿಶ್ವ ಒಕ್ಕಲಿಗ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

#### ಕಲಾತಂಡಗಳ ಮೆರಗು

ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ನಾದಸ್ವರ, ಚೆಂಡೆ, ಪೂಜಾ ಕುಣಿತ, ಬೊಂಬೆಮೇಳ, ಮಹಿಳಾ ವೀರಗಾಸೆ, ಕೊಂಬು-ಕಹಳೆ, ಡೊಳ್ಳು ಕುಣಿತ, ನಂದಿಧ್ವಜ ಕುಣಿತ, ಜಗ್ಗಲಿಗೆ ಮೇಳ, ಕೀಲು ಕುದುರೆ, ಕಂಗೀಲು ನೃತ್ಯ, ತಮಟೆ ವಾದನ, ಕಂಸಾಳೆ, ಗೊರವರ ಕುಣಿತ ಮುಂತಾದ ಜಾನಪದ ಕಲಾತಂಡಗಳು ಕೃಷ್ಣರಾಜಸಾಗರ ಬೃಂದಾವನದ ಕಳೆಯನ್ನು ಹೆಚ್ಚಿಸಿದವು. ಗಣೇಶ, ಚಾಮುಂಡೇಶ್ವರಿ ಹಾಗೂ ತುಳುನಾಡಿನ ದೈವಾರಾಧನೆಯ ಪ್ರದರ್ಶನಗಳು ನೆರೆದಿದ್ದವರಲ್ಲಿ ಭಕ್ತಿಭಾವ ಮೂಡಿಸಿದವು.